# ಆಲಿಸ್ ಆಗಸ್ಟ ಬಾಲ್

## ಕುಷ್ಠರೋಗಿಗಳ ದೇವತೆ

**ಹಲವು ಪ್ರಥಮಗಳ ಒಡತಿಯಾಗಿ ಗುರುತಿಸಿಕೊಂಡಿರುವ ಆಲಿಸ್ ಬಾಲ್, ಕುಷ್ಠರೋಗಕ್ಕೆ ಪ್ರಪ್ರಥಮ ಚುಚ್ಚುಮದ್ದು ಕಂಡುಹಿಡಿದ ಮಹಿಳೆ. ಸಾವಿರಾರು ರೋಗಿಗಳನ್ನು ನರಳಾಟದಿಂದ ಪಾರು ಮಾಡಿದರೂ, 24ರ ಹರಯದಲ್ಲೇ ಸಾವಿಗೀಡಾದ ನತದೃಷ್ಟ ಸಾಧಕಿ.**

■ ಡಾ. ಎಂ. ಸತ್ಯನಾರಾಯಣ ರಾವ್



ಆಲಿಸ್ ಆಗಸ್ಟ ಬಾಲ್! ಈಕೆಯ ಜೀವನದಲ್ಲಿ ಎಲ್ಲವೂ ಪ್ರಥಮಗಳ ಸರಮಾಲೆಯೇ! ಹಿರಿಯ ವೈದ್ಯ ಸಂಶೋಧಕರೂ ನಾಚುವಂತೆ ಸಾಧನೆ ಮಾಡಿದ ಕಿರಿಯೆ! ವೈದ್ಯೆಯಲ್ಲದ ವೈದ್ಯೆ! ಅಮೆರಿಕದ ಔಷಧ ರಸಾಯನಶಾಸ್ತ್ರಜ್ಞೆ! ಆಲಿಸ್ ಬಾಲ್ ತಮ್ಮ ಸಣ್ಣ ವಯಸ್ಸಿಗೆ, ಅಂದರೆ 23ರ ವಯಸ್ಸಿಗೇ ಕುಷ್ಠರೋಗಕ್ಕೆ ಚುಚ್ಚುಮದ್ದು ತಯಾರಿಸಿದ ಪ್ರಪ್ರಥಮ ಮಹಿಳೆ! ಕುಷ್ಠರೋಗ ಚಿಕಿತ್ಸಾ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದವರು.

ವಾಷಿಂಗ್ಟನ್ ವಿಶ್ವವಿದ್ಯಾನಿಲಯದಲ್ಲಿ ಔಷಧ ರಸಾಯನಶಾಸ್ತ್ರದಲ್ಲಿ ಪದವಿ ಪಡೆದ ಪ್ರಪ್ರಥಮ ಯುವತಿ, ಪ್ರಪ್ರಥಮ ಆಫ್ರಿಕನ್–ಅಮೆರಿಕನ್ ಮಹಿಳೆ; ಹವಾಯಿ ಕಾಲೇಜಿನಲ್ಲಿ ಔಷಧ ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಪ್ರಪ್ರಥಮ ಯುವತಿ; ರಸಾಯನಶಾಸ್ತ್ರ ವಿಭಾಗದಲ್ಲಿ ಶಿಕ್ಷಕಿಯಾಗಿ, ಸಂಶೋಧಕಿಯಾಗಿ ಕೆಲಸ ಮಾಡಿದ ಪ್ರಪ್ರಥಮ ಮಹಿಳೆ– ಹೀಗೆ, ಹಲವು ಅಗ್ಗಳಿಕೆಗಳು ಆಲಿಸ್ ಅವರವು.

ಜುಲೈ 24, 1892ರಲ್ಲಿ ಅಮೆರಿಕದ ವಾಷಿಂಗ್ಟನ್ ರಾಜ್ಯದ ಸಿಯಾಟಲ್ ನಗರದಲ್ಲಿ ಹುಟ್ಟಿದ ಆಲಿಸ್ ಅವರ ಶಾಲಾ ಶಿಕ್ಷಣ ಹವಾಯಿ ದ್ವೀಪದ ಹೊನೊಲುಲು ನಗರ ಹಾಗೂ ಸಿಯಾಟಲ್‌ನಲ್ಲಿ ನಡೆಯಿತು. ವಾಷಿಂಗ್ಟನ್ ವಿಶ್ವವಿದ್ಯಾನಿಲಯದಲ್ಲಿ ಪದವಿ ಮುಗಿಸಿದರು. ಆನಂತರ ಸ್ನಾತಕೋತ್ತರ ಪದವಿಗೆ ಹವಾಯಿ ಕಾಲೇಜು ಆರಿಸಿಕೊಂಡರು. ಔಷಧ ರಸಾಯನಶಾಸ್ತ್ರದಲ್ಲಿ (ಫಾರ್ಮಾಸ್ಯುಟಿಕಲ್ ಕೆಮಿಸ್ಟ್ರಿ) ಎಂ.ಎಸ್. ಪದವಿ ಮುಗಿಸಿ ಅದೇ ಕಾಲೇಜಿನಲ್ಲಿ ರಸಾಯನಶಾಸ್ತ್ರ ವಿಭಾಗದಲ್ಲಿ ಶಿಕ್ಷಕಿಯಾಗಿ, ವಿಜ್ಞಾನಿಯಾಗಿ ಸೇರಿದರು. ಆಲಿಸ್ ಜೀವನವೇನೂ ಸುಗಮವಾಗಿರಲಿಲ್ಲ. ಓದಿನಲ್ಲಿ ಚುರುಕಾಗಿದ್ದ ಅವರು ವ್ಯಾಸಂಗದ ಸಮಯದಲ್ಲಿ ಒಟ್ಟೊಟ್ಟಿಗೆ ವಿದ್ಯಾರ್ಥಿಯಾಗಿ, ಶಿಕ್ಷಕಿಯಾಗಿ, ಸಂಶೋಧಕಿಯಾಗಿ ಶ್ರಮಪಡುತ್ತಿದ್ದವರು. ಲಿಂಗಭೇದ ಎದುರಿಸುತ್ತಲೇ ಬೆಳೆದರು.

### ಕುಷ್ಠರೋಗ ಚಿಕಿತ್ಸೆಯೆಡೆಗೆ...

19ನೇ ಶತಮಾನದ ಕೊನೆ ಹಾಗೂ 20ನೇ ಶತಮಾನದ ಆರಂಭದ ಭಾಗ ಕುಷ್ಠರೋಗ ವಿಪರೀತವಾಗಿ ಕಾಣಿಸಿಕೊಳ್ಳುತ್ತಿದ್ದ ಕಾಲ. ಕುಷ್ಠವನ್ನು ಗುಣಪಡಿಸಲು ಸಾಧ್ಯವೇ ಇಲ್ಲ, ಔಷಧಿಯೇ ಇಲ್ಲ ಎನ್ನುವ ಸ್ಥಿತಿ ಇದ್ದ ಕಾಲ. ಆ ಸಂದರ್ಭ ಹವಾಯಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದ ಆಲಿಸ್ ಬಾಲ್, ಅದೇ ನಗರದಲ್ಲಿ ವೈದ್ಯರಾಗಿದ್ದ ಡಾ. ಹ್ಯಾರಿ ಹಾಲ್ ನ್ಯೂನ್ ಎಂಬುವರ ಸಂಪರ್ಕಕ್ಕೆ ಬಂದರು.

ಹ್ಯಾರಿ ಹಾಲ್ ನ್ಯೂನ್, ಅಮೆರಿಕ ಸಾರ್ವಜನಿಕ ಆರೋಗ್ಯ ವಿಭಾಗದ ಕುಷ್ಠರೋಗ ತಪಾಸಣಾ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ಆಗ ಕುಷ್ಠರೋಗಿಗಳನ್ನು ಪತ್ತೆ ಮಾಡಿ ಹವಾಯಿಯ ಮತ್ತೊಂದು ದ್ವೀಪ ಮೊಲೊಕಾಯಿಗೆ ಅಟ್ಟಲಾಗುತ್ತಿತ್ತು. ಅದು ಕುಷ್ಠರೋಗಿಗಳ ದ್ವೀಪವಾಗಿತ್ತು. ಕುಷ್ಠರೋಗಿಗಳು ಅಲ್ಲಿಯೇ ಬದುಕಿ ಅಲ್ಲಿಯೇ ಸಾಯಬೇಕಿತ್ತು. ಅಲ್ಲಿ ಹಾಗೆ ಸಾಯಲೆಂದೇ ಕಳುಹಿಸುತ್ತಿದ್ದರು. ಅವರೆಲ್ಲಾ